

# artificial intelligence

ಆನ್‌ಲೈನ್ ಖಾತೆ ಮತ್ತು ಇ ಮೇಲ್‌ಗಳನ್ನು ನಿರ್ವಹಿಸುವ ‘24 ಮಿ’ ಎಂಬ ಅಪ್ಲಿಕೇಶನ್‌ಗಳು ‘ಇದು ಟ್ರೇಲರ್ ಅಷ್ಟೇ, ಅಸಲೀ ಪಿಕ್ಚರ್ ಬಾಕಿ ಇದೆ!’ ಎನ್ನುವ ಮುನ್ಸೂಚನೆ ನೀಡಿವೆ.

‘ಎಐ’ ಸಾಧನಗಳು ಹುಟ್ಟಿಸಿರುವ ಬೆರಗು ಈಗ ಹಳೆಯ ಮಾತು. ಪ್ರಸ್ತುತ ಅವು ನಮಗೆ ಶಾಪವೋ ವರವೋ ಎಂಬುದು ನಿಕ್ಕಿಯಾಗಬೇಕಿದೆ. ‘ಕೃತಕ ಬುದ್ಧಿಮತ್ತೆ ಯಂತ್ರಗಳು ತಾವೇ ಸ್ವತಃ ನಿರ್ಣಯ ಕೈಗೊಳ್ಳುವುದರಿಂದ ಭವಿಷ್ಯದಲ್ಲಿ ಮಾನವನನ್ನು ನಿರ್ನಾಮ ಮಾಡುತ್ತವೆ’ ಎಂದು ಎಲಾನ್ ಮಸ್ಕ್ ಹೇಳಿದ್ದಾರೆ. ವಿಶ್ವ ವಿಜ್ಞಾನದ ಹರಿಕಾರ ಸ್ಟೀಫನ್ ಹಾಕಿಂಗ್, ‘ಕೃತಕ ಬುದ್ಧಿಮತ್ತೆ ಕಾರ್ಯಕ್ಷಮತೆಯಲ್ಲಿ ಮನುಷ್ಯನನ್ನೂ ಮೀರಿಸುತ್ತದೆ’ ಎಂದಿದ್ದರು. ‘ಸಾರ್ವಜನಿಕ ಹಾಗೂ ಖಾಸಗೀ ವಲಯಗಳ ಬಳಕೆಗಾಗಿ ಕೃತಕ ಬುದ್ಧಿಮತ್ತೆಯನ್ನು ಹೇಗೆ ಬಳಸಬೇಕು ಎಂಬುದರ ಕುರಿತು ವಿವೇಚನೆಯಿಂದ ಚಿಂತಿಸಬೇಕಾದ ಸಮಯ ಬಂದಿದೆ’ ಎನ್ನುವುದು ಮೈಕ್ರೋಸಾಫ್ಟ್‌ನ ಸಿಇಓ ಸತ್ಯ ನಾದೆಲ್ಲ ಅವರ ಕಿವಿಮಾತು. ಫೇಸ್ ರಿಕಗ್ನಿಷನ್ ‘ಎಐ’ನಿಂದ ಸಾಕಷ್ಟು ಲಾಭವಿದೆ ಎಂದಿರುವ ಅವರ ಹೇಳಿಕೆಗೆ ವ್ಯತಿರಿಕ್ತವಾದ ಹೇಳಿಕೆ ನೀಡಿರುವ ಮೈಕ್ರೋಸಾಫ್ಟ್‌ನ ಅಧ್ಯಕ್ಷ ಬ್ರ್ಯಾಡ್ ಸ್ಮಿತ್ – ‘ಇದರಿಂದ ವ್ಯಕ್ತಿಯ ಖಾಸಗಿತನಕ್ಕೆ ಧಕ್ಕೆಯಾಗುತ್ತದೆ’ ಎಂದಿದ್ದಾರೆ. ಗೂಗಲ್ ‘ಡೀಪ್ ಮೈಂಡ್’ನ ಸಂಸ್ಥಾಪಕ ಡೆಮಿಸ್ ಹಸಾಬಿಸ್ ‘ಕೃತಕ ಬುದ್ಧಿಮತ್ತೆ ಮನುಕುಲ ಎದುರಿಸುತ್ತಿರುವ ಎಲ್ಲಾ ಸಮಸ್ಯೆಗಳಿಗೆ ಅಂತಿಮ ಪರಿಹಾರ’ ಎಂದು ಭವಿಷ್ಯ ನುಡಿದಿದ್ದಾರೆ.

ಕೃತಕ ಬುದ್ಧಿಮತ್ತೆಯನ್ನು ನಾಲ್ಕನೆಯ ಕೈಗಾರಿಕಾ ಕ್ರಾಂತಿಗೆ ಹೋಲಿಸಿರುವ ಕೆಲವು ವಿಜ್ಞಾನಿಗಳು ಇದು ಮನಕುಲದ ಅಂತಿಮ ಆವಿಷ್ಕಾರ ಎಂದಿದ್ದು, ‘ಎಐ’ ಕ್ರಮೇಣ ನಮ್ಮ ನಾಗರಿಕತೆಯನ್ನು ನಾಶಪಡಿಸುತ್ತದೆ ಎಂದು ಚಿಂತಿತರಾಗಿದ್ದಾರೆ. ವರ್ಲ್ಡ್ ಎಕನಾಮಿಕ್ ಫೋರಂನ ‘ಎಐ’ ವಿಭಾಗದ ಮುಖ್ಯಸ್ಥೆ ಕೇ–ಫಿರ್ತ್ ಬಟ್ಟರ್ ಫೀಲ್ಡ್, ‘ಕೃತಕ ಬುದ್ಧಿಮತ್ತೆಯಿಂದ ಅನುಕೂಲಗಳೇನೋ ಇವೆ. ಆದರೆ ಅದು ಹಿಡಿತದಲ್ಲಿದ್ದಾಗ ಮಾತ್ರ. ಅದನ್ನು ಹಿಡಿತದಲ್ಲಿಡುವಂತಹ ತಂತ್ರಜ್ಞಾನ ಹೊಂದುವುದು ಆದ್ಯತೆಯಾಗಬೇಕು’ ಎಂದಿದ್ದಾರೆ. ಭಾರತದ ನೀತಿ ಆಯೋಗ ‘ಭಾರತದ ಸರ್ವರಿಗೂ ಕೃತಕ ಬುದ್ಧಿಮತ್ತೆ’ ಎನ್ನುವ ಧ್ಯೇಯ ವಾಕ್ಯವನ್ನು ಈಗಾಗಲೇ ಬಿಡುಗಡೆಗೊಳಿಸಿ ಎಐ ಸಂಬಂಧಿತ ಶಿಕ್ಷಣ, ಸಂಶೋಧನೆ ಮತ್ತು ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುತ್ತದೆ.

**ಕಂಪ್ಯೂಟರ್‌ಗಳಿಂದ ಕೆಲಸ ತೆಗೆಯಲು LISP ಎಂಬ ಹೈಲೆವೆಲ್ ಲಾಂಗ್ವೇಜ್‌ನ್ನು ರಚಿಸಿದ ಮೆಕಾರ್ಥಿ ‘ಆರ್ಟಿಫಿಶಿಯಲ್ ಇಂಟೆಲಿಜೆನ್ಸ್’ ಎಂಬ ಪದವನ್ನು ಮೊಟ್ಟಮೊದಲ ಬಾರಿಗೆ ಬಳಸಿದರು.**



ಸಮುದ್ರದೊಳಗಿನ ಪರಿಸರದ ಕುರಿತು ಅಧ್ಯಯನ ಮಾಡುವುದಕ್ಕೆ ಸಹಕಾರಿಯಾಗುವ ರೀತಿಯಲ್ಲಿ, ಕೇಂಬ್ರಿಡ್ಜ್‌ನ ಎಂಐಟಿ ಕಂಪ್ಯೂಟರ್ ಸೈನ್ಸ್ ಆ್ಯಂಡ್ ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಲ್ಯಾಬೋರೇಟರಿಯಲ್ಲಿ ತಯಾರಿಸಲಾದ ರೋಬೊ ಮೀನು